**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 110/2023

| | | |
|---|---|---|
| ಸಾಕ್ಷಿದಾರರ ಹೆಸರು | - ಪರಮೇಶ.ಎಸ್. | ಪಿಡಬ್ಲೂ - 01 |
| ತಂದೆಯ ಹೆಸರು | - ಶಿವಮೂರ್ತಿ .ಡಿ. | ಸಿಡಬ್ಲೂ - 01 |
| ವಯಸ್ಸು | - 34 ವರ್ಷ | |
| ಉದ್ಯೋಗ | - ಕೂಲಿ ಕೆಲಸ ಮತ್ತು ಸಮಾಜ ಸೇವೆ | |
| ವಾಸ ಸ್ಥಳ | - ಆಶ್ರಯ ಬಡಾವಣೆ, ತರೀಕೆರೆ | |

ದಿನಾಂಕಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಈ ದಿನ 2, 4 ರಿಂದ 6 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಸದರಿ ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಹಾಗಾಗಿ ಸದರಿ ಆರೋಪಿತರ ಗೈರು ಹಾಜರಿಯಲ್ಲಿ ಸಾಕ್ಷಿಯ ವಿಚಾರಣೆಯನ್ನು ನಡೆಸಲಾಯಿತು.)*

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ಈ ಪ್ರಕರಣದ ಎಲ್ಲಾ ಆರೋಪಿತರು ಗೊತ್ತು. ಚಾಸಾ.5 ನನ್ನ ತಂದೆ. ಚಾಸಾ.6 ನನ್ನ ತಮ್ಮ. ಚಾಸಾ.7 ನನ್ನ ತಾಯಿ. ಚಾಸಾ.3 ಮತ್ತು 4 ಗೊತ್ತು, ಅವರು ನಮ್ಮ ಬೀದಿಯವರು. ಚಾಸಾ.2 ಗೊತ್ತು. ನಾನು ಪರಿಶಿಷ್ಟ ಜಾತಿಯ ಹಂದಿಜೋಗಿಸ್ ಜನಾಂಗಕ್ಕೆ ಸೇರಿದವನು. 1, 2 ಮತ್ತು 4 ನೇ ಆರೋಪಿತರು ಕುರುಬ ಜಾತಿಗೆ ಸೇರಿದವರು, 3 ಮತ್ತು 5 ನೇ ಆರೋಪಿತರು ವಾಲ್ಮೀಕಿ ನಾಯಕ

ಜಾತಿಗೆ ಸೇರಿದವರು ಮತ್ತು 6 ನೇ ಆರೋಪಿ ಆದಿ ಕರ್ನಾಟಕ ಜಾತಿಗೆ ಸೇರಿದವನು.

2. 1992 ನೇ ಇಸವಿಯಲ್ಲಿ ತರೀಕೆರೆ ಪುರಸಭೆಯ ಮುಖ್ಯಾಧಿಕಾರಿಯಾಗಿದ್ದ ಕೆ.ಎಂ.ಧರ್ಮಪ್ಪರವರು ಗಾಳಿಹಳ್ಳಿ ಗ್ರಾಮದ ಆಶ್ರಯ ಬಡಾವಣೆಯ ಸರ್ವೆ ನಂಬರು 107 ರಲ್ಲಿ 25 x 30 ಅಡಿ ವಿಸ್ತೀರ್ಣದ ಸೈಟ್ ನಂಬರು 108 ನ್ನು ನನ್ನ ತಾಯಿಯಾದ ಚಾಸಾ.7 ರೇಣುಕಮ್ಮ ಕೋಂ ಶಿವಮೂರ್ತಿ.ಡಿ. ರವರಿಗೆ ಮಂಜೂರು ಮಾಡಿದ್ದರು. ಅದರಂತೆ ಸದರಿ ಸೈಟಿನ ಖಾತೆಯನ್ನು ನನ್ನ ತಾಯಿಯ ಹೆಸರಿಗೆ ಮಾಡಲಾಗಿತ್ತು ಮತ್ತು ಆಕೆ ಕಂದಾಯವನ್ನು ಕಟ್ಟುತ್ತಿದ್ದರು. ನಾವು ಸದರಿ ಸೈಟಿನಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದೆವು.

3. ಘಟನೆಯ 3 ತಿಂಗಳ ಹಿಂದೆ ನಮಗೆ ಹಣಕಾಸಿನ ತೊಂದರೆ ಇದ್ದ ಕಾರಣ ಮೇಲೆ ಹೇಳಿದ ಸೈಟನ್ನು ಮಾರಾಟ ಮಾಡಲು ತೀರ್ಮಾನಿಸಿದೆವು. ಅದರಂತೆ ನಾವು ತರೀಕೆರೆಯಲ್ಲಿರುವ ಅಲಂಕಾರ ಹೋಟೆಲ್‌ನ ಮಾಲೀಕರ ಮಗನಿಗೆ ನಾವು ಸೈಟನ್ನು ಮಾರಾಟ ಮಾಡಲು ತೀರ್ಮಾನಿಸಿದ ಬಗ್ಗೆ ತಿಳಿಸಿದೆವು. ಆಗ ಆತ ನಿಮ್ಮ ಸೈಟನ್ನು ಮಾರಾಟ ಮಾಡಲು ಮೂಲ ದಾಖಲಾತಿಗಳ ಜೊತೆಗೆ ಇ-ಸ್ವತ್ತು ಬೇಕು ಎಂದು ಹೇಳಿದರು. ಆಗ ನನ್ನ ತಂದೆ ತರೀಕೆರೆ ಪುರಸಭೆಗೆ ಹೋಗಿ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಂದಾಯ ಅಧಿಕಾರಿಯಾದ ಮಂಜುನಾಥರವರನ್ನು ಸಂಪರ್ಕಿಸಿದರು. ಆಗ ಸದರಿ ಮಂಜುನಾಥರವರು ಸಂಬಂಧಿಸಿದ ದಾಖಲೆಗಳನ್ನು ತರಿಸಿ ಪರಿಶೀಲಿಸಿದರು. ಮಂಡಲ್ ಅಸೆಸಮೆಂಟ್ ರಿಜಿಸ್ಟರಿನಲ್ಲಿ ಹಕ್ಕು ಪತ್ರದ ಆಧಾರದ ಮೇಲೆ ನನ್ನ ತಾಯಿಯ

ಹೆಸರನ್ನು ಮೇಲೆ ಹೇಳಿದ ಸೈಟಿಗೆ ಸಂಬಂಧಿಸಿದಂತೆ ದಾಖಲಿಸಲಾಗಿತ್ತು. ಆದರೆ ಅದರಲ್ಲಿ ನನ್ನ ತಾಯಿಯ ಹೆಸರನ್ನು ರೌಡ್‌ಆಫ್ ಮಾಡಿ 3 ನೇ ಆರೋಪಿಯಾದ ಸುರೇಶ್ ಬಿನ್ ತೊರೆಯಪ್ಪರವರ ಹೆಸರನ್ನು ಬರೆಯಲಾಗಿತ್ತು. ಮುನ್ಸಿಪಾಲಿಟಿಯವರು ನಿರ್ವಹಿಸುತ್ತಿದ್ದ ಕೆ.ಎಂ.ಎಫ್.24 ರಿಜಿಸ್ಟರಿನಲ್ಲಿ ಖಾತೆ ಸಂಖ್ಯೆ 5118 ರಲ್ಲಿ ನನ್ನ ತಾಯಿಯ ಹೆಸರನ್ನು ನಮೂದಿಸಲಾಗಿತ್ತು. ನಂತರ ನನ್ನ ತಾಯಿಯ ಹೆಸರನ್ನು ತೆಗೆದು ರಂಗಪ್ಪ ಎಂಬುವವರ ಹೆಸರನ್ನು ನಮೂದು ಮಾಡಿ, ನಂತರ ಸದರಿ ರಂಗಪ್ಪರವರ ಹೆಸರನ್ನು ರೌಡ್‌ಆಫ್ ಮಾಡಿ 3 ನೇ ಆರೋಪಿಯಾದ ಸುರೇಶ್ ಬಿನ್ ತೊರೆಯಪ್ಪರವರ ಹೆಸರನ್ನು ಬರೆಯಲಾಗಿತ್ತು. ನಾವು ಇ-ಸ್ವತ್ತನ್ನು ಕೋರಿ ಅರ್ಜಿ ಸಲ್ಲಿಸುವ ಕಾಲಕ್ಕೆ 3 ನೇ ಆರೋಪಿಯಿಂದ ನಮ್ಮ ಸೈಟನ್ನು 1 ಮತ್ತು 2 ನೇ ಆರೋಪಿತರು ಖರೀದಿಸಿ ಅವರು ಸಹ ಇ-ಸ್ವತ್ತನ್ನು ಕೋರಿ ಅರ್ಜಿ ಸಲ್ಲಿಸಿದ್ದರು. ಆಗ್ಗೆ ತರೀಕೆರೆ ಪುರಸಭೆಯ ಮುಖ್ಯಾಧಿಕಾರಿಯಾದ ಮಹಂತೇಶ್ ರವರು ನಿಮ್ಮಿಬ್ಬರಿಗೂ ನ್ಯಾಯ ಕೊಡಿಸುತ್ತೇನೆ ಎಂದು ಹೇಳಿ ನ್ಯಾಯಾಧೀಕರಣ ಮಾಡಿದರು, ಆದರೆ ನಮಗೆ ಅಲ್ಲಿ ನ್ಯಾಯ ಸಿಗಲಿಲ್ಲ. 3 ನೇ ಆರೋಪಿ ತರೀಕೆರೆ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾಗಿದ್ದ ವಿರೇಂದ್ರರವರಿಂದ ನನ್ನ ತಂದೆಗೆ ಫೋನ್ ಮಾಡಿಸಿ ನಿಮ್ಮ ಸೈಟಿನಲ್ಲಿ ಯಾರು ಇರಕೂಡದು, ಖಾಲಿ ಮಾಡಬೇಕು ಎಂದು ಬೆದರಿಕೆ ಹಾಕಿಸುತ್ತಿದ್ದನು. ಆಗ ನಾನು ನನ್ನ ತಂದೆಯಿಂದ ಫೋನ್‌ನ್ನು ತೆಗೆದುಕೊಂಡು ಸದರಿ ವಿರೇಂದ್ರರವರೊಂದಿಗೆ ಮಾತನಾಡಿ ಸುಪ್ರೀಂ ಕೋರ್ಟ್ ಆದೇಶದಂತೆ ಪೊಲೀಸರು ಸಿವಿಲ್ ವ್ಯಾಜ್ಯಕ್ಕೆ ತಲೆ ಹಾಕುವಂತೆ ಇಲ್ಲ, ಅದನ್ನು ನಾವು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುತ್ತೇವೆ ಎಂದು ಹೇಳಿದೆನು.

4. ದಿಃ 18-12-2022 ರಂದು ನಮ್ಮ ಸೈಟಿನಿಂದ ಸ್ವಲ್ಪ ದೂರದಲ್ಲಿರುವ ಅಂಬಮಾತೃ ದೇವತೆ ದೇವಸ್ಥಾನದಲ್ಲಿ ನನ್ನ ತಂದೆ ಪೂಜೆ ಮಾಡುತ್ತಿದ್ದರು ಮತ್ತು ನಾನು ಸಹ ಅಲ್ಲಿ ಇದ್ದೆನು. ಆಗ ನನ್ನ ತಂದೆಯ ಮೊಬೈಲ್ ಸಂಖ್ಯೆ 8277714438 ಗೆ ಬೆಳಿಗ್ಗೆ 11 ಗಂಟೆಗೆ ನಮ್ಮ ಪಕ್ಕದ ಮನೆಯವರಾದ ಆರತಿರವರು ಕರೆ ಮಾಡಿ, ನಿಮ್ಮ ಮನೆಯ ಹತ್ತಿರ ಯಾರೋ ಜನರು ಬಂದು ಮನೆಯನ್ನು ಒಡೆಯುತ್ತಿದ್ದಾರೆ, ಬೇಗ ಬನ್ನಿ ಎಂದು ಹೇಳಿದರು. ಆಗ ನನ್ನ ತಂದೆ ಮತ್ತು ತಾಯಿ ಅಲ್ಲಿಂದ ಹೊರಟರು. ನಾನು ನಮ್ಮ ಮನೆಗೆ ಹತ್ತಿರದ ದಾರಿಯಾದ ಬಿಲ್ವಪತ್ರೆ ವನದ ಮುಖಾಂತರ ನಮ್ಮ ಮನೆಗೆ ಓಡಿ ಹೋದೆನು.

5. ನಾನು ನಮ್ಮ ಮನೆಯ ಹತ್ತಿರ ಹೋಗಿ ನೋಡಿದಾಗ ಅಲ್ಲಿ 3 ನೇ ಆರೋಪಿ ಸುರೇಶ, ವಿಜಯ ಮತ್ತು ಶಿವು ಎಂಬುವವರು ಇದ್ದರು. ಅವರು ಆ ಸಮಯದಲ್ಲಿ ಅತಿಯಾಗಿ ಮದ್ಯವನ್ನು ಸೇವಿಸಿದ್ದರು. ಅವರು ಕೈಗಳಲ್ಲಿ ಹಾರೆಗಳನ್ನು ಹಿಡಿದುಕೊಂಡು ನಮ್ಮ ಮನೆಯ ಬೇಸ್‌ಮೆಂಟ್ ಗೆ ಹೊಡೆಯುತ್ತಿದ್ದರು. ನನ್ನ ತಂದೆತಾಯಿ ಅವರನ್ನು ತಡೆಯಲು ಹೋದಾಗ ಸದರಿ ವ್ಯಕ್ತಿಗಳು ಅವರನ್ನು ಹಿಡಿದು ತಳ್ಳಿ ಅವರೊಂದಿಗೆ ಗಲಾಟೆ ಮಾಡಿದರು. ನನ್ನ ತಾಯಿ ಅವರನ್ನು ಕುರಿತು, ಇದು ನಮ್ಮ ಸ್ವತ್ತು, ನಮಗೆ ಯಾವುದೇ ನೋಟೀಸನ್ನು ಕೊಟ್ಟಿಲ್ಲ, ಯಾಕೆ ಹೀಗೆ ಏಕಾಏಕಿ ಬಂದು ತೊಂದರೆ ಮಾಡುತ್ತಿದ್ದೀರಿ ಎಂದು ಕೇಳಿದರು. ಆಗ ನಾನು ಕೂಡಲೇ 112 ಸಹಾಯವಾಣಿಗೆ ಕರೆ ಮಾಡಿದೆನು. ನಾನು ಕರೆ ಮಾಡಿದ ಅರ್ಧ ಗಂಟೆ ಸುಮಾರಿಗೆ ಪೊಲೀಸರು ಅಲ್ಲಿಗೆ ಬಂದರು. ಆ ಸಮಯದಲ್ಲೂ ಸಹ 3 ನೇ ಆರೋಪಿ ಮತ್ತು ಮೇಲೆ ಹೇಳಿದ

ವ್ಯಕ್ತಿಗಳು ನನ್ನ ತಂದೆತಾಯಿಯ ಮೇಲೆ ಗಲಾಟೆ ಮಾಡುತ್ತಿದ್ದರು. ಅಲ್ಲಿಗೆ ಬಂದ ಪೊಲೀಸರು ಅದನ್ನು ವಿಡಿಯೋ ಮಾಡಿಕೊಂಡರು, ನಾನು ಸಹ ನನ್ನ ಮೊಬೈಲಿನಲ್ಲಿ ವಿಡಿಯೋ ಮಾಡಿಕೊಂಡೆನು. ನಮ್ಮ ಪಕ್ಕದ ಮನೆಯವರಾದ ಬಾಬಣ್ಣರವರು ಗಲಾಟೆಯನ್ನು ಬಿಡಿಸಲು ಬಂದರು. ಆದರೆ ಅವರಿಗೆ ಗಲಾಟೆಯನ್ನು ತಡೆಯಲು ಆಗಲಿಲ್ಲ, ಹಾಗಾಗಿ ಅವರು ಸೈಡಿಗೆ ಹೋದರು. ಅಲ್ಲಿಗೆ ಬಂದಿದ್ದ ಪೊಲೀಸರಿಗೆ ನಾವು ಸೈಟಿಗೆ ಸಂಬಂದಿಸಿದಂತೆ ನಮ್ಮ ಬಳಿ ಇದ್ದ ಹಕ್ಕುಪತ್ರ ಮುಂತಾದ ದಾಖಲೆಗಳನ್ನು ತೋರಿಸಿದೆವು. ಅವರು ನಮಗೆ ಠಾಣೆಗೆ ಹೋಗಿ ದೂರು ಕೊಟ್ಟು, ಕೋರ್ಟಿನಲ್ಲಿ ನ್ಯಾಯ ಪಡೆದುಕೊಳ್ಳಿ ಎಂದು ಹೇಳಿದರು.

6. ಅದರಂತೆ ನಾನು ದೂರನ್ನು ತಯಾರಿಸಿ ಅದೇ ದಿನ ಅಂದರೆ ದಿಃ 18-12-2022 ರಂದು ತರೀಕೆರೆ ಪೊಲೀಸ್ ಠಾಣೆಗೆ ದೂರನ್ನು ಕೊಡಲು ಹೋದೆನು. ಆದರೆ ಅದನ್ನು ಪೊಲೀಸರು ಸ್ವೀಕರಿಸಲಿಲ್ಲ, ಬದಲಿಗೆ 3 ನೇ ಆರೋಪಿಯನ್ನು ಠಾಣೆಗೆ ಕರೆಯಿಸಿ ರಾಜಿ ಮಾಡಿಸಲು ನೋಡಿದರು. ಆದರೆ ಅದಕ್ಕೆ 3 ನೇ ಆರೋಪಿ ಒಪ್ಪಲಿಲ್ಲ. ಪೊಲೀಸರು ನನ್ನ ದೂರನ್ನು ಸ್ವೀಕರಿಸಲಿಲ್ಲ.

7. ಅದೇ ದಿನ ಸಂಜೆ 7 ಗಂಟೆಗೆ ನಾನು ಗಾಳಿಹಳ್ಳಿ ಕ್ರಾಸಿನಲ್ಲಿರುವ ನಮ್ಮ ದೇವಸ್ಥಾನದಲ್ಲಿ ಇದ್ದೆನು. ಆಗ 4 ನೇ ಆರೋಪಿ ರಾಜು ಅಲಿಯಾಸ್ ಹಾಲೇಶ್ ಬಿನ್ ಮೈಲಾರಪ್ಪ ಒಂದು ಆಟೋದಲ್ಲಿ ಗಾಳಿಹಳ್ಳಿಯ ಆಶ್ರಯ ಬಡಾವಣೆಯಲ್ಲಿರುವ ನಮ್ಮ ಮನೆಗೆ ಬಂದನು. ಸದರಿ ಆಟೋದಲ್ಲಿ 3 ನೇ ಆರೋಪಿ ಸುರೇಶ, ಆತನ ಮಗನಾದ 5 ನೇ ಆರೋಪಿ ಕಿರಣ್ ನಾಯಕ ಮತ್ತು 6 ನೇ ಆರೋಪಿ ವಿಜಯಕುಮಾರ ಇದ್ದರು. ಆಟೋದ ಹಿಂದೆ

6 ನೇ ಆರೋಪಿಯ ಗ್ಯಾಂಗಿಗೆ ಸೇರಿದ 30 ಜನರು ಬೈಕುಗಳಲ್ಲಿ ಬಂದು, ನಮ್ಮ ಮನೆಯ ಸ್ವಲ್ಪ ದೂರದಲ್ಲಿರುವ ಖಾಲಿ ಜಾಗದಲ್ಲಿ ಬೈಕುಗಳನ್ನು ನಿಲ್ಲಿಸಿದ್ದರು. ನಮ್ಮ ಮನೆಯ ಹಿಂಭಾಗದಲ್ಲಿ 1 ಮತ್ತು 2 ನೇ ಆರೋಪಿತರ ಸಂಬಂಧಿಕರ ಮನೆ ಇದೆ. ಆ ಸಮಯಕ್ಕೆ 1 ಮತ್ತು 2 ನೇ ಆರೋಪಿತರು ಅವರ ಮನೆಗೆ ಬಂದಿದ್ದರು. ಸದರಿ ವಿಚಾರವನ್ನು ತಿಳಿದು ನಾನು, ನನ್ನ ತಂದೆ ಮತ್ತು ನನ್ನ ತಮ್ಮನಾದ ಚಾಸಾ.6 ಶಿವಕುಮಾರ ರವರು ನಮ್ಮ ಮನೆಯ ಹತ್ತಿರ ಬೈಕಿನಲ್ಲಿ ಹೋದೆವು.

**(ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ